ಹೇಳಿದರೆ, ಯಾವ ರೀತಿ ತಪ್ಪಾಗುತ್ತದೆ? ನಿಮ್ಮ ತಾರ್ಕಿಕ ಲೆಕ್ಕದಲ್ಲಿಯೇ ಇದೂ ಕೂಡ ಜೀವನದ ಭದ್ರತೆ, ಆರೋಗ್ಯ ಮತ್ತು ಅಪಘಾತಗಳು ಇವುಗಳಿಗೆ ಸಂಬಂಧಪಟ್ಟಂತೆ ನಿಯಂತ್ರಣ ಮಾಡಲಿಕ್ಕೆ ಸಮಾಜ ಕೆಲವು ತಮ್ಮ ವೈಯಕ್ತಿಯ ಸ್ವಾತಂತ್ರ್ಯದ ಹಕ್ಕನ್ನು ಸರ್ಕಾರಕ್ಕೆ ಮತ್ತು ಸಮುದಾಯಕ್ಕೆ ಕೊಟ್ಟು ಮತ್ತೆ ಅದು ರಕ್ಷಣೆಯನ್ನು ಪಡೆಯುತ್ತದೆ. ಆ ಕಾರಣಕ್ಕಾಗಿಯೇ ಇದನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಮಾಡಿದ್ದೇವೆ. ಮತ್ತೊಂದು, ನಮ್ಮ ಸಾವು ನಮ್ಮ ಕೈಯಲ್ಲಿದೆ ಎಂಬ ಮಾತನ್ನು ಹೇಳುತ್ತಾರೆ; ಅದಲ್ಲ. ಕಾಂಟ್ರಿಬ್ಯೂಟರಿ ನೆಗ್ಲಿಜನ್ಸ್ ಎನ್ನತಕ್ಕಂಥಾದ್ದು ಕೂಡ ನಮ್ಮ ಕಾನೂನಿನ ಅಡಿಯಲ್ಲಿ ಇದೆ. ನಾನು ಸರಿಯಾದಂಥ ರೀತಿಯಲ್ಲಿ ವಾಹನವನ್ನು ಚಾಲನೆ ಮಾಡಿಕೊಂಡು ಹೋಗುತ್ತಾ ಇದ್ದರೂ ಕೂಡ, ಬೇರೊಬ್ಬನ ಅಜಾಗೃತಿಯಿಂದ ಸಾವು ಆಗುವಂಥ, ಅಪಘಾತ ಆಗುವಂಥ ಸಂಭವಗಳು ಇರುವ ಕಾರಣಕ್ಕಾಗಿಯೇ ಇದು ಅತ್ಯಂತ ಉತ್ತಮವಾಗಿರತಕ್ಕಂಥ ನಿರ್ಧಾರ. ಆ ಕಾರಣಕ್ಕಾಗಿಯೇ ಹೆಲ್ಮೆಟ್ ಧರಿಸುವುದನ್ನು ಕಡ್ಡಾಯಗೊಳಿಸುತ್ತೇವೆ; ಇದು ನಮ್ಮ ಸರ್ಕಾರದ ನಿಲುವು.

ಶ್ರೀ ವಾಟಾಳ್ ನಾಗರಾಜ್ : ಹೆಣ್ಣು ಮಕ್ಕಳು, ಸಣ್ಣ ಮಗು ಕೂಡಿಸಿಕೊಂಡು ಬರುತ್ತಾರೆ, ಅವರು ಹೆಲ್ಮೆಟ್ ಆ ಮಗುವಿಗೆ ಹಾಕುವುದಕ್ಕಾಗುತ್ತದೆಯೇ? ಆದ್ದರಿಂದ, ಈ ಕಡ್ಡಾಯ ಸರಿಯಲ್ಲ. ಹೆಲ್ಮೆಟ್ ಧರಿಸುವುದನ್ನು ಕಡ್ಡಾಯ ಮಾಡುವ ನೀತಿಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತೇನೆ. ಈ ಕಡ್ಡಾಯ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಹಿಂದುಗಡೆ ಸೀಟಿನಲ್ಲಿ ಕುಳಿತವರಿಗೆ ವಿನಾಯಿತಿ ಕೊಡಬೇಕು. ಏಕೆಂದರೆ, ಅದು ತಪ್ಪಾಗುತ್ತದೆ. ಹಿಂದುಗಡೆ ಸೀಟಿನವರೂ ಹೆಲ್ಮೆಟ್ ಇಟ್ಟುಕೊಂಡು, ಮುಂದುಗಡೆಯವರೂ ಹೆಲ್ಮೆಟ್ ಇಟ್ಟುಕೊಂಡು, ಮಗು ಇದ್ದರೆ, ಆ ಮಗುವಿಗೂ ಹೆಲ್ಮೆಟ್ ಇಟ್ಟುಕೊಂಡು ಹೋಗಬೇಕೆಂಬುದು ಸರಿಯಲ್ಲ. ನಿಮಗೆ ಸ್ವಲ್ಪ ದಯೇ ಇರಲಿ. ಕರುಣೆ ಇರಲಿ.

(ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು.)

(ಅಡಚಣೆ)

ಶ್ರೀ ಕೆ. ಶ್ರೀನಿವಾಸಗೌಡ : ಈ ವಿಧಾನ ಸಭೆಯಲ್ಲಿ ವಾಟಾಳ್ ನಾಗರಾಜರು ಒನ್ ಮ್ಯಾನ್ ಆರ್ಮಿ ಆಗಿಬಿಟ್ಟಿದ್ದಾರೆ. ಅವರಿಗೆ ಯಾರದ್ದೂ ಸೈನ್ಯ ಬೇಕಾಗಿಲ್ಲ. ಅವರೇ ಸೈನ್ಯಾಧಿಪತಿ, ಅವರೇ ಸೈನ್ಯ.

(ಅಡಚಣೆ)

(ಇ) ವಿಷಯ: ಪೊಲೀಸ್ ವೆರಿಫಿಕೇಷನ್ ಶುಲ್ಕ ವಹಿಸಿರುವ ಬಗ್ಗೆ.

ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ) : ಮಾನ್ಯ ಸಭಾಧ್ಯಕ್ಷರೇ, ಇವತ್ತು ತಮ್ಮ ಮುಖೇನ ಸರ್ಕಾರಕ್ಕೆ ಮತ್ತೊಮ್ಮೆ ಸದನದಲ್ಲಿ ಮನವಿ ಮಾಡುವುದೇನೆಂದರೆ, ಇವತ್ತು ಬಹಳಷ್ಟು ನಿರುದ್ಯೋಗ ಸಮಸ್ಯೆ ಕೊಡುತ್ತಾ ಇದೆ. ಯಾವುದೇ ನಿರುದ್ಯೋಗಿಗಳು, ಸರ್ಕಾರಿ, ಖಾಸಗಿ ಅಥವಾ ಮಲ್ಟಿನ್ಯಾಷನಲ್ ಕಂಪನಿಗಳಿಗೆ ಅಪ್ಲೈ ಮಾಡಬೇಕಾದರೆ, ಪೋಲಿಸ್ ಕ್ಲಿಯರೆನ್ಸ್ ಬೇಕಾಗುತ್ತದೆ. ಪೊಲೀಸ್ ಇಲಾಖೆಯಲ್ಲಿ ಅಥವಾ ಸಮಾಜದಲ್ಲಿ ಯಾವುದೇ ಅಪರಾಧಗಳು ಇಲ್ಲವೆಂದು ಪೊಲೀಸ್ ವೆರಿಫಿಕೇಷನ್ ಆಗಿ, ಕ್ಲಿಯರೆನ್ಸ್ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ಸಂಬಂಧಪಟ್ಟ ಹಾಗೆ ಹಿಂದೆ